# ವಾಹನ ವಿಮೆ ಬಗ್ಗೆ

ಮೋಟಾರ್ ವಾಹನ ಕಾಯಿದೆ-1988 ರ ಸೆಕ್ಷನ್ 146 ರನ್ವಯ ವಾಹನಗಳಿಗೆ ವಿಮೆ ಮಾಡಿಸುವುದು ಕಡ್ಡಾಯವಾಗಿದೆ.

## ಕೆ.ಜಿ.ಐ.ಡಿ.ಯಲ್ಲಿ ಕಡ್ಡಾಯ ವಿಮೆ ಮಾಡಿಸಬೇಕಾದ ವಾಹನಗಳು

1. ಸರ್ಕಾರದ ವಾಹನಗಳು.
2. ಸರ್ಕಾರದ ಅಧೀನ ನಿಗಮ/ಮಂಡಳಿ/ಸಂಸ್ಥೆಗಳ ಮತ್ತು ಸರ್ಕಾರದ ಆರ್ಥಿಕ ಹಿತಾಸಕ್ತಿ ಇರುವ ಎಲ್ಲಾ ವಾಹನಗಳು.
3. ಸರ್ಕಾರಿ ನೌಕರರು ವಾಹನ ಮುಂಗಡ ಪಡೆದಿದ್ದಲ್ಲಿ, ಅದು ಬಡ್ಡಿ ಸಹಿತ ಸಂಪೂರ್ಣ ತೀರುವಳಿಯಾಗುವವರೆಗೆ ವಿಮೆ ಮಾಡಿಸಬೇಕು.

## ಟ್ಯಾರೀಫ್ ಪ್ರಕಾರ ವಾಹನಗಳ ವಿಂಗಡನೆ

1. ದ್ವಿಚಕ್ರ ವಾಹನಗಳು.
2. ಕಾರುಗಳು/ಜೀಪ್ ಗಳು.
3. ವಾಣಿಜ್ಯ ವಾಹನಗಳು/ಇತರೆ ವಾಹನಗಳು.

## ವಿಮೆ ಮಾಡುವ ಕಾರ್ಯವಿಧಾನ

ವಾಹನ ವಿಮಾ ಪಾಲಿಸಿಗಳು ವಾರ್ಷಿಕ ಒಡಂಬಡಿಕೆಗಳಾಗಿದ್ದು, ಪ್ರಾರಂಭದಲ್ಲಿಯೇ ಪ್ರೀಮಿಯಂ ಪಾವತಿಸಿ, ಪಾಲಿಸಿ ಪಡೆಯಬೇಕಾಗುತ್ತದೆ ಮತ್ತು ಪಾಲಿಸಿ ಅವಧಿ ಪೂರ್ಣಗೊಳ್ಳುವ ಮೊದಲೇ ನವೀಕರಣ ಮಾಡಬೇಕಾಗುತ್ತದೆ. ವಿಮಾ ಅವಧಿ ಲ್ಯಾಪ್ಸ್ ಆದಲ್ಲಿ ವಿಮಾ ಇಲಾಖೆಯ ಹೊಣೆಗಾರಿಕೆ ಇರುವುದಿಲ್ಲ. ಪ್ರೀಮಿಯಂ ಚಲನ್ ಮೂಲಕ ಅಥವಾ ಡಿ.ಡಿ. (ನಿರ್ದೇಶಕರು, ಕೆ.ಜಿ.ಐ.ಡಿ. ವಾಹನ ಶಾಖೆ, ಬೆಂಗಳೂರು ಹೆಸರಿನಲ್ಲಿ ಪಡೆದಿರಬೇಕು) ಮೂಲಕ ಪಾವತಿಸಬೇಕು.

ವಿಮಾ ಪ್ರಮಾಣ ಪತ್ರ ಮತ್ತು ಪಾಲಿಸಿಯನ್ನು ನಂತರ ನಿರ್ದೇಶನಾಲಯದಿಂದ ಕಳುಹಿಸಲಾಗುವುದು. ಪಾಲಿಸಿಯನ್ನು ಪ್ರಥಮ ಬಾರಿಗೆ ಮಾತ್ರ ನೀಡಲಾಗುವುದು. ಹೊಸ ವಾಹನವಾಗಿದ್ದಲ್ಲಿ ಆರ್.ಟಿ.ಓ. ರಿಜಿಸ್ಟ್ರೇಶನ್ ನಂತರ ಆರ್.ಸಿ.ಪುಸ್ತಕ ಛಾಯಾ ಪ್ರತಿ ಸಲ್ಲಿಸಬೇಕು.

## ಪಾಲಿಸಿಗಳ ಸೌಲಭ್ಯಗಳು

ವಿಮೆ ಮಾಡಿಸಿದಾಗ ನೀಡುವ "ಪಾಲಿಸಿ" ಯಲ್ಲಿ ಸೌಲಭ್ಯಗಳನ್ನು ವಿವರವಾಗಿ ತಿಳಿಸಲಾಗಿದೆ.

1. ಪ್ಯಾಕೇಜ್ ಪಾಲಿಸಿ:- ಹೆಸರೇ ತಿಳಿಸುವಂತೆ ಇದು ಸಮಗ್ರ ವಿಮೆ, ಇದು ತೃತೀಯ ಪಕ್ಷ ವಿಮೆ ಸಹ ಒಳಗೊಂಡಿದೆ. ಅಪಘಾತಗಳಿಂದ ವಾಹನ ಕ್ಕೆ ಜಖಂ ಆದಾಗ, ಅದನ್ನೂ ಸಹ ವಿಮಾ ರಕ್ಷೆ ಒಳಗೊಂಡಿದೆ.
2. ಲಯಬಿಲಿಟಿ ಓನ್ಲಿ ಪಾಲಿಸಿ:- ಅಪಘಾತಗಳಿಂದ ಯಾವುದಾದರೂ ತೃತೀಯ ಪಕ್ಷಗಳಿಗೆ ಹಾನಿ ಉಂಟಾದಲ್ಲಿ, ಅದನ್ನು ಭರಿಸುವ (ನ್ಯಾಯಾಲಯ ಆದೇಶಗಳಿಗೆ ಒಳಪಟ್ಟು) ಹೊಣೆಗಾರಿಕೆ ವಿಮಾ ಇಲಾಖೆ ಮೇಲಿದೆ.

## ವಿವಿಧ ಬಗೆಯ ಕ್ಲೇಮುಗಳು

ವಾಹನಗಳು ಅಪಘಾತಕ್ಕೆ ಒಳಪಟ್ಟಲ್ಲಿ ಮಾತ್ರ (ಅಂದರೆ ರೋಡ್ ಟ್ರಾಫಿಕ್ ಆಕ್ಸಿಡೆಂಟ್) ಕ್ಲೇಮುಗಳು ಉದ್ಭವಿಸುತ್ತವೆ.

## ಇದರಲ್ಲಿ ಎರಡು ಬಗೆಗಳಿವೆ

1. ಓನ್ ಡ್ಯಾಮೇಜ್ ಕ್ಲೇಮುಗಳು.
2. ವಾಹನ ಅಪಘಾತ ಪರಿಹಾರ ಮಂಡಳಿಯಲ್ಲಿ ದಾಖಲಾಗಿರುವ ಎಂ.ವಿ.ಸಿ. ಕ್ಲೇಮುಗಳು ಮತ್ತು ವರ್ಕ್ ಮನ್ ಕಂಪನ್ ಸೇಷನ್ ಆಕ್ಟ್-1923 ರನ್ವಯ ದಾಖಲಿಸಲಾದ ಡಬ್ಲ್ಯೂ.ಸಿ.ಎ.ಕ್ಲೇಮುಗಳು. (ಇವೆರಡು ನ್ಯಾಯಾಲಯ ತೀರ್ಪಿಗೆ ಒಳಪಟ್ಟಿವೆ)